# ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1996

**ಪ್ರಕರಣಗಳ ಕ್ರಮ ಪಟ್ಟಿ**

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು**

## ಅಧ್ಯಾಯ– I

**ಪ್ರಾರಂಭಿಕ**


1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ
2. ಪರಿಭಾಷೆಗಳು


## ಅಧ್ಯಾಯ – II

**ಮೀನು ಹಿಡಿಯುವುದಕ್ಕೆ ಲೈಸೆನ್ಸ್**


3. ಮೀನು ಹಿಡಿಯುವುದಕ್ಕೆ
4. ಮೀನು ತಳಿ ಸಂವರ್ಧನೆಗಾಗಿ ನೊಂದಣಿ
5. ಮೀನುಗಾರಿಕೆ ಹಕ್ಕುಗಳನ್ನು ಗುತ್ತಿಗೆಗೆ ನೀಡುವುದು
6. ಮಿನು ಹಿಡಿಯುವುದಕ್ಕೆ ನಿಯಂತ್ರಣ
7. ಮೀನುಧಾಮಗಳ ಘೋಷಣೆ


## ಅಧ್ಯಾಯ III

**ಕರ್ನಾಟಕ ಒಳನಾಡು ಮೀನುಗಾರಿಕೆ ಸಲಹಾ ಮಂಡಲಿಯ ರಚನೆ**


8. ಒಳನಾಡು ಮೀನುಗಾರಿಕೆ ಸಲಹಾ ಮಂಡಲಿಯ ರಚನೆ
9. ಮಂಡಳಿಯ ಸದಸ್ಯತ್ವಕ್ಕೆ ಅನರ್ಹತೆಗಳು
10. ನಾಮನಿರ್ದೇಶಿತ ಸದಸ್ಯರ ಪದಾವಧಿ ಮತ್ತು ಸೇವಾಷರತ್ತುಗಳು
11. ಸದಸ್ಯರನ್ನು ತೆಗೆದುಹಾಕುವುದು
12. ಆಕಸ್ಮಿಕ ಖಾಲಿ ಸ್ಥಾನಗಳು
13. ಮಂಡಲಿಯ ಸಭೆಗಳು


## ಅಧ್ಯಾಯ IV

**ಅಪರಾಧಗಳು ಮತ್ತು ದಂಡನೆಗಳು**


14. ಪ್ರದೇಶ, ಶೋಧನೆ, ಜಪ್ತಿ ಮತ್ತು ಬಂಧನದ ಅಧಿಕಾರ
15. ದಂಡನೆಗಳು
16. ಅಕ್ರಮ ಜಪ್ತಿಗಾಗಿ ಶಿಕ್ಷೆ
17. ಅಪರಾಧಗಳನ್ನು ರಾಜಿ ಮಾಡಿಕೊಳ್ಳುವ ಅಧಿಕಾರ

18. ಅಪರಾಧದ ಸಂಜ್ಞಾನ

19. ಇತರ ಕಾನೂನುಗಳ ಕಾರ್ಯಾಚರಣೆಯ ಪ್ರತಿಬಂಧಕಗಳು

20. ಕಂಪನಿಗಳಿಂದ ಅಪರಾಧ

**ಅಧ್ಯಾಯ V**

**ಸಂಕೀರ್ಣ**

21. ಅಧಿಕಾರಿಗಳು ಲೋಕನೌಕರರಾಗಿರುವುದು

22. ಸದ್ಭಾವನೆಯಿಂದ ಕೈಗೊಂಡ ಕ್ರಮದ ಬಗ್ಗೆ ರಕ್ಷಣೆ

23. ನಿಯಮಗಳ ರಚನಾಧಿಕಾರ

24. ನಿರಸನ ಮತ್ತು ಉಳಿಸುವಿಕೆ

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

ರಾಜ್ಯದಲ್ಲಿ ಹಲವಾರು ಭಾಗಗಳಲ್ಲಿ ಈಗ ಜಾರಿಯಲ್ಲಿರುವ ಅಧಿನಿಯಮಗಳು ಎಂದರೆ, ಭಾರತ ಮೀನುಗಾರಿಕೆ ಅಧಿನಿಯಮ, 1897 (1897ರ ಕೇಂದ್ರ ಅಧಿನಿಯಮ, IV) ಮೀನುಗಾರಿಕೆ (ಮದ್ರಾಸ್ ತಿದ್ದುಪಡಿ) ಅಧಿನಿಯಮ 1927 (1929ರ ಮದ್ರಾಸ್ ಅಧಿನಿಯಮ II) ಹೈದರಾಬಾದ್ ಮೀನುಗಾರಿಕೆ ಅಧಿನಿಯಮ, 1356 ಫಸಲಿ (1356ರ ಫಸಲಿಯ ಹೈದರಾಬಾದ್ ಅಧಿನಿಯಮ 23), ಮೈಸೂರು ಬೇಟೆ ಮತ್ತು ಮೀನು ಸಂರಕ್ಷಣಾ ಅಧಿನಿಯಮ, 1901 (1901ರ ವಿನಿಯಮ II) ಇವು ಈ ಸಂಬಂಧವಾಗಿ ವ್ಯಾಪಕ ಉಪಬಂಧಗಳನ್ನು ಕಲ್ಪಿಸದಿರುವುದರಿಂದ ರಾಜ್ಯದಲ್ಲಿ ಒಳನಾಡು ಮೀನುಗಾರಿಕೆಯನ್ನು ಸಂರಕ್ಷಿಸುವುದು, ಅಭಿವೃದ್ಧಿಪಡಿಸುವುದು ಮತ್ತು ನಿಯಂತ್ರಿಸುವುದು ಮತ್ತು ಮೀನು ಮತ್ತು ಮೀನುಗಾರಿಕೆಗೆ ಸಂಬಂಧಪಡುವಷ್ಟರ ಮಟ್ಟಿಗೆ ಅವುಗಳನ್ನು ನಿರಸನಗೊಳಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಜೂನ್ ತಿಂಗಳಿಂದ ಸೆಪ್ಟೆಂಬರ್ ತಿಂಗಳಿನವರೆಗಿನ ಅವಧಿಯಲ್ಲಿ ಮೀನು ಹಿಡಿಯುವುದನ್ನು ನಿಷೇಧಿಸುವ ಮೂಲಕ ಮಹಾಸ್ಸಾರ್, ಗೇಮ್‌ಫಿಶ್, ಲೈವ್‌ಫಿಶ್‌ಗಳಂಥ ಮೀನಿನ ವಿವಿಧ ಬಗೆಯ ಅಪರೂಪ ತಳಿಗಳು ನಾಶವಾಗುವುದನ್ನು ತಡೆಯುವುದು ಕೂಡ ಅವಶ್ಯವೆಂಬುದಾಗಿ ಭಾವಿಸಲಾಗಿದೆ. ಅಲ್ಲದೆ ಒಳನಾಡು ಮೀನುಗಾರಿಕೆಯನ್ನು ವೈಜ್ಞಾನಿಕ ವಿಧಾನದಲ್ಲಿ ಸಂರಕ್ಷಿಸುವುದು, ಅಭಿವೃದ್ಧಿಗೊಳಿಸುವುದು ಮತ್ತು ನಿಯಂತ್ರಣಗೊಳಿಸುವುದು ಹಾಗೂ ಅದಕ್ಕೆ ಸಂಬಂಧಿಸುವ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಸಹ ಅವಶ್ಯವಾಗಿದೆ.

ಆದ್ದರಿಂದ ಈ ವಿಧೇಯಕ.

[1996ರ ವಿಧಾನಸಭಾ ವಿಧೇಯಕ ಸಂಖ್ಯೆ 11]

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿಯ 21ನೇ ನಮೂದನೆ)

* * *

## 2003 ರ ಕರ್ನಾಟಕ ಅಧಿನಿಯಮ ಸಂಖ್ಯೆ 27

(2೦೦3 ರ ಜುಲೈ ಹದಿನೈದನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1996

(2003 ರ ಜುಲೈ ಏಳನೇ ದಿನಾಂಕಂದು ರಾಷ್ಟ್ರಾಧ್ಯಕ್ಷರಿಂದ ಅನುಮತಿಯನ್ನು ಪಡೆಯಲಾಗಿದೆ)

ರಾಜ್ಯದಲ್ಲಿ ಒಳನಾಡು ಮೀನುಗಾರಿಕೆಯ ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣಕ್ಕಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ. ರಾಜ್ಯದಲ್ಲಿ ಒಳನಾಡು ಮೀನುಗಾರಿಕೆಯ ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣಕ್ಕೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ; ಇದು ಭಾರತ ಗಣರಾಜ್ಯದ, ನಲವತ್ತೇಳನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

### ಅಧ್ಯಾಯ - I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ.-** (1) ಈ ಅಧಿನಿಯಮವನ್ನು ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1996 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ನಿಗದಿಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

(3) ಈ ಅಧಿನಿಯಮದಲ್ಲಿ ಇರುವುದಾವುದೂ, ಕರ್ನಾಟಕ ಸಾಗರ ಮೀನುಗಾರಿಕೆ (ನಿಯಂತ್ರಣ) ಅಧಿನಿಯಮ, 1986ರ (1986ರ ಕರ್ನಾಟಕ ಅಧಿನಿಯಮ 24) 2ನೇ ಪ್ರಕರಣದ ( ೧ )ನೇ ಖಂಡದ ಅರ್ಥವ್ಯಾಪ್ತಿಯೊಳಗಿನ ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ವನ್ಯಮೃಗ ಸಂರಕ್ಷಣೆ ಅಧಿನಿಯಮ, 1972ರ (1972ರ ಕೇಂದ್ರ ಅಧಿನಿಯಮ 53) ಅಡಿಯಲ್ಲಿ ಘೋಷಿಸಲಾದ ರಾಷ್ಟ್ರೀಯ ಉದ್ಯಾನಗಳು ಮತ್ತು ಅಭಯಾರಣ್ಯಗಳು ಮತ್ತು ಪ್ರಾದೇಶಿಕ ಜಲ ಪ್ರದೇಶದಿಂದ ಆಚೆಗಿನ ಯಾವುದೇ ಜಲ ಪ್ರದೇಶದಲ್ಲಿ ಮೀನು ಹಿಡಿಯುವುದಕ್ಕೆ ಮತ್ತು ಮೀನುಗಾರಿಕೆಗೆ ಅನ್ವಯಿಸತಕ್ಕದ್ದಲ್ಲ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಪೀಲು ವಿಚಾರಣಾ ಪ್ರಾಧಿಕಾರ" ಎಂದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ರಚಿಸಿದ ಅಪೀಲು ವಿಚಾರಣಾ ಪ್ರಾಧಿಕಾರ;

(ಬಿ) "ಪ್ರಾಧಿಕೃತ ಅಧಿಕಾರಿ" ಎಂದರೆ, ಪ್ರಾಧಿಕೃತ ಅಧಿಕಾರಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಅವನಿಗೆ ವಿಧಿಸಲಾದ ಕರ್ತವ್ಯಗಳನ್ನು ನಿರ್ವಹಿಸಲು ಈ ಪರವಾಗಿ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಪ್ರಾಧಿಕೃತಗೊಳಿಸಿದ ಮೀನುಗಾರಿಕೆ ಸಹಾಯಕ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅಧಿಕಾರಿ;

(ಸಿ) "ಮಂಡಲಿ" ಎಂದರೆ, 8ನೇ ಪ್ರಕರಣದ ಅಡಿಯಲ್ಲಿ ರಚಿಸಿಲಾದ ಕರ್ನಾಟಕ ಒಳನಾಡು ಮೀನುಗಾರಿಕೆ ಸಲಹಾ ಮಂಡಲಿ;

(ಡಿ) "ನಿರ್ದೇಶಕ" ಎಂದರೆ, ರಾಜ್ಯ ಸರ್ಕಾರವು ನೇಮಕ ಮಾಡಿದ ಮೀನುಗಾರಿಕೆ ನಿರ್ದೇಶಕ;

(ಇ) "ಮೀನು" ಎಂಬುದು ಸೀಗಡಿ, ಪ್ರಾನ್, ಏಡಿ, ಲೋಬ್‌ಸ್ಟರ್, ಮೃದ್ವಂಗಿಗಳು ಮತ್ತು ಅವುಗಳ ಮರಿಗಳನ್ನು ಒಳಗೊಳ್ಳುತ್ತದೆ;

(ಎಫ್) "ಮೀನು ಸಾಕಾಣಿಕೆ" ಎಂದರೆ, ಸ್ವಾಭಾವಿಕ ರೀತಿಯಲ್ಲಲ್ಲದೆ ಬೇರೆ ವಿಧಾನಗಳಿಂದ ಮೀನಿನ ತಳಿ ಸಂವರ್ಧನೆ ಮಾಡುವುದಕ್ಕೆ ಮತ್ತು ಸಾಕುವುದಕ್ಕೆ ಸಂಬಂಧಪಟ್ಟ ಯಾವುದೇ ಕಾರ್ಯ ಚಟುವಟಿಕೆ;

(ಜಿ) “ಮೀನುಗಾರಿಕೆ” ಎಂದರೆ, ನೀರಿರುವ ಯಾವುದೇ ಪ್ರದೇಶದಲ್ಲಿ ಮೀನಿನ ಸಂರಕ್ಷಣೆ, ಅಭಿವೃದ್ಧಿ ಮತ್ತು ಸಂತಾನವೃದ್ಧಿಯ ಯಾವುದೇ ಕಾರ್ಯಚಟುವಟಿಕೆ ಅಥವಾ ವೃತ್ತಿ ನಿರ್ವಹಿಸುವುದಕ್ಕೆ ಸಂಬಂಧಿಸಿದಂಥ ಕಾರ್ಯಚಟುವಟಿಕೆ ಅಥವಾ ವೃತ್ತಿ;

(ಹೆಚ್) “ಮೀನು ಹಿಡಿಯುವುದು” ಎಂದರೆ, ಯಾವುದೇ ನೀರಿನಲ್ಲಿ ಮೀನು ಹಿಡಿಯುವುದಕ್ಕೆ ಸಂಬಂಧಪಟ್ಟಂಥ ಯಾವುದೇ ಕಾರ್ಯ ಅಥವಾ ಕಾರ್ಯಚಟುವಟಿಕೆ;

(ಐ) “ಮೀನುಗಾರಿಕೆ ಉತ್ಪನ್ನಗಳು” ಎಂದರೆ, ಯಾವುದೇ ಮೀನು ಅಥವಾ ಅದರ ಭಾಗಗಳಿಂದ ಪಡೆದ ಎಲ್ಲ ಉತ್ಪನ್ನಗಳು;

(ಜೆ) “ಮೀನುಧಾಮ” ಎಂದರೆ, 7ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಘೋಷಿಸಲಾದ ನೀರಿರುವ ಯಾವುದೇ ಪ್ರದೇಶ;

(ಕೆ) “ಮೀನು ಸಂತಾನ” ಎಂದರೆ, ಸೂಕ್ತ ಪ್ರಾರಂಭಿಕ ಹಂತಗಳಲ್ಲಿನ ಮೀನಿನ ಮೊಟ್ಟೆ, ಮೀನಿನ ಸಣ್ಣ ಮತ್ತು ದೊಡ್ಡ ಮರಿಗಳು;

(ಎಲ್) “ಖಾಸಗಿ ನೀರು” ಎಂದರೆ, ಯಾವನೇ ವ್ಯಕ್ತಿಯ ಪ್ರತ್ಯೇಕ ಸ್ವತ್ತಾಗಿರುವ ಅಥವಾ ತತ್ಕಾಲದಲ್ಲಿ ಯಾವನೇ ವ್ಯಕ್ತಿಯು ಮಾಲೀಕನಾಗಿ, ಗುತ್ತಿಗೆದಾರನಾಗಿ ಅಥವಾ ಬೇರೆ ಯಾವುದೇ ಸಾಮರ್ಥ್ಯದಲ್ಲಿ ಮೀನು ಹಿಡಿಯಲು ಪ್ರತ್ಯೇಕ ಹಕ್ಕು ಹೊಂದಿರುವ ನೀರು;

(ಎಂ) “ನೀರು” ಎಂದರೆ, (ಎಲ್) ಖಂಡದಲ್ಲಿ ನಿರ್ದಿಷ್ಟಪಡಿಸಿದ ನೀರಲ್ಲದ ಇತರ ನೀರು.

## ಅಧ್ಯಾಯ – II

## ಮೀನು ಹಿಡಿಯುವುದಕ್ಕೆ ಲೈಸೆನ್ಸ್

**3. ಮೀನು ಹಿಡಿಯುವುದಕ್ಕೆ ನಿಷೇಧ.–** (1) ಯಾವನೇ ವ್ಯಕ್ತಿಯು, ಇತರ ಯಾವುದೇ ನೀರಿನಲ್ಲಿ (2)ನೇ ಉಪಪ್ರಕರಣದ ಅಡಿಯಲ್ಲಿ ನೀಡಲಾದ ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿದ ನಿಬಂಧನೆಗಳು ಮತ್ತು ಷರತ್ತುಗಳ ಅಡಿಯಲ್ಲಿ ಮತ್ತು ಅವುಗಳಿಗನುಸಾರವಾಗಿ ಹೊರತು ಮೀನು ಹಿಡಿಯತಕ್ಕದ್ದಲ್ಲ.

ಪರಂತು, ರಾಜ್ಯ ಸರ್ಕಾರವು, ನಿಯಮಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ನೀರಿರುವ ಯಾವುದೇ ಪ್ರದೇಶಕ್ಕೆ (1)ನೇ ಉಪ-ಪ್ರಕರಣದ ಉಪಬಂಧಗಳಿಂದ ವಿನಾಯಿತಿ ನೀಡಬಹುದು. ಮತ್ತೂ ಪರಂತು, ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಯಾವುದೇ ನೀರಿನಲ್ಲಿ ಮೀನು ಹಿಡಿಯುವುದರಲ್ಲಿ ನಿರತನಾದ ಒಬ್ಬ ವ್ಯಕ್ತಿಯು, ಅಧಿನಿಯಮವು ಹಾಗೆ ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳ ಅವಧಿಯವರೆಗೆ ಮತ್ತು ಸದರಿ ಮೂರು ತಿಂಗಳ ಅವಧಿಯೊಳಗೆ ಲೈಸೆನ್ಸಿಗಾಗಿ ಅವನು ಅರ್ಜಿಯನ್ನು ಸಲ್ಲಿಸಿರುವಲ್ಲಿ ಅಂಥ ಅರ್ಜಿಯು ಇತ್ಯರ್ಥವಾಗುವವರೆಗೆ, ಹಾಗೆ ನಿರತನಾಗಿರುವುದನ್ನು ಮುಂದುವರೆಸಬಹುದು.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಲೈಸೆನ್ಸನ್ನು ಪಡೆಯ ಬಯಸುವ ಯಾವನೇ ವ್ಯಕ್ತಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಶುಲ್ಕವನ್ನು ಸಂದಾಯ ಮಾಡಿ ಪ್ರಾಧಿಕೃತ ಅಧಿಕಾರಿಗೆ ಅರ್ಜಿ ಸಲ್ಲಿಸತಕ್ಕದ್ದು.

(3) (2)ನೇ ಉಪ-ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಪ್ರಾಧಿಕೃತ ಅಧಿಕಾರಿಯು ಅವನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆ ಮಾಡಿದ ನಂತರ ಮತ್ತು ಮೀನಿನ ಸಂರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಲೈಸೆನ್ಸನ್ನು ನೀಡಬಹುದು ಅಥವಾ ನಿರಾಕರಣೆಗೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿದ ನಂತರ ಹಾಗೆ ನೀಡಲು ನಿರಾಕರಿಸಬಹುದು ಮತ್ತು ಲೈಸೆನ್ಸನ್ನು ನೀಡಲು ನಿರಾಕರಿಸಿದಾಗ, ಅದಕ್ಕಾಗಿ ಸಂದಾಯ ಮಾಡಿದ ಶುಲ್ಕವನ್ನು ಅರ್ಜಿದಾರನಿಗೆ ಮರು ಸಂದಾಯ ಮಾಡತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ನೀಡಲಾದ ಲೈಸೆನ್ಸು,–

(ಎ) ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು;

(ಬಿ) ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಮಾನ್ಯವಾಗಿರತಕ್ಕದ್ದು;

(ಸಿ) ನಿಯಮಿಸಬಹುದಾದಂಥ ಇತರ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟಿರತಕ್ಕದ್ದು;

(ಡಿ) ವರ್ಗಾವಣೀಯವಾಗಿರತಕ್ಕದ್ದಲ್ಲ.

(5) ಪ್ರಾಧಿಕೃತ ಅಧಿಕಾರಿಯು ಉಚಿತ ಮತ್ತು ಸಾಕಷ್ಟು ಕಾರಣಗಳಿಗಾಗಿ, ಲಿಖಿತದಲ್ಲಿ ದಾಖಲು ಮಾಡಿ ಈ ಪ್ರಕರಣದ ಅಡಿಯಲ್ಲಿ ನೀಡಲಾದ ಯಾವುದೇ ಲೈಸೆನ್ಸನ್ನು ಅಮಾನತ್ತುಗೊಳಿಸಲು ಅಥವಾ ರದ್ದುಗೊಳಿಸಲು ಆದೇಶಿಸಬಹುದು;

ಪರಂತು, ಲೈಸೆನ್ಸ್‌ದಾರನಿಗೆ ಅವನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಕಾಲಾವಕಾಶವನ್ನು ನೀಡಿದ ಹೊರತು, ಹಾಗೆ ಯಾವುದೇ ಅಮಾನತು ಅಥವಾ ರದ್ದಿಯಾತಿಯನ್ನು ಮಾಡತಕ್ಕದ್ದಲ್ಲ.

(6) (3)ನೇ ಉಪ-ಪ್ರಕರಣದ ಅಡಿಯಲ್ಲಿ ಲೈಸೆನ್ಸ್ ನೀಡಲು ನಿರಾಕರಿಸುವ ಆದೇಶದ ವಿರುದ್ಧ ಅಥವಾ (5)ನೇ ಉಪ-ಪ್ರಕರಣದ ಅಡಿಯಲ್ಲಿ ಲೈಸೆನ್ಸನ್ನು ಅಮಾನತ್ತಿನಲ್ಲಿಡುವ ಅಥವಾ ರದ್ದುಗೊಳಿಸುವ ಆದೇಶದ ವಿರುದ್ಧ ಒಂದು ಅಪೀಲನ್ನು, ಯಾವ ಆದೇಶದ ವಿರುದ್ಧ ಅಪೀಲು ಮಾಡಲಾಗುವುದೋ ಆ ಆದೇಶವು ಅರ್ಜಿದಾರನಿಗೆ ತಲುಪಿದ ಮೂವತ್ತು ದಿನಗಳೊಳಗೆ ಅಪೀಲು ವಿಚಾರಣಾ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು;

ಪರಂತು, ಅರ್ಜಿದಾರನು ಸೂಕ್ತ ಸಮಯದಲ್ಲಿ ಅಪೀಲು ಸಲ್ಲಿಸದೇ ಇದ್ದುದಕ್ಕೆ ಸಾಕಷ್ಟು ಕಾರಣ ಇದ್ದುವೆಂದು ಅಪೀಲು ವಿಚಾರಣಾ ಪ್ರಾಧಿಕಾರಕ್ಕೆ ಮನವರಿಕೆಯಾದರೆ ಮೇಲೆ ಹೇಳಿದ ಅವಧಿಯು ಮುಕ್ತಾಯದ ನಂತರವೂ ಅದು ಅಪೀಲನ್ನು ಅಂಗೀಕರಿಸಬಹುದು.

(7) (6)ನೇ ಉಪ-ಪ್ರಕರಣದ ಅಡಿಯಲ್ಲಿ ಅಪೀಲಿನ ಬಗ್ಗೆ ಮಾಡಲಾದ ಪ್ರತಿಯೊಂದು ಆದೇಶವೂ ಅಂತಿಮವಾಗಿರತಕ್ಕದ್ದು.

**4. ಮೀನು ತಳಿ ಸಂವರ್ಧನೆಗಾಗಿ ನೋಂದಣಿ.-** (1) ಯಾವನೇ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಹೊರತು, ಮೀನು ತಳಿಗಳ ಮಾರಾಟಕ್ಕಾಗಿ ಮೀನು ತಳಿಗಳನ್ನು ಸಂವರ್ಧಿಸತಕ್ಕದ್ದಲ್ಲ:

ಪರಂತು, ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಮೀನು ತಳಿಗಳ ಮಾರಾಟಕ್ಕಾಗಿ ಮೀನು ಸಂವರ್ಧನೆಯಲ್ಲಿ ತೊಡಗಿರುವ ಯಾವನೇ ವ್ಯಕ್ತಿಯು ಅಂಥ ಪ್ರಾರಂಭದಿಂದ ಮೂರು ತಿಂಗಳುಗಳವರೆಗೆ ಮತ್ತು ಸದರಿ ಮೂರು ತಿಂಗಳುಗಳ ಅವಧಿಯೊಳಗೆ ಅಂಥ ನೋಂದಣಿಗಾಗಿ ಅವನು ಅರ್ಜಿಯನ್ನು ಸಲ್ಲಿಸಿರುವಲ್ಲಿ, ಅಂತಹ ಅರ್ಜಿಯು ಇತ್ಯರ್ಥವಾಗುವವರೆಗೆ ಅದನ್ನು ಮುಂದುವರೆಸಬಹುದು;

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ನೋಂದಣಿಗಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಶುಲ್ಕದ ಸಂದಾಯದ ನಂತರ ಪ್ರಾಧಿಕೃತ ಅಧಿಕಾರಿಗೆ ಸಲ್ಲಿಸತಕ್ಕದ್ದು;

(3) (2)ನೇ ಉಪ-ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ನಂತರ ಪ್ರಾಧಿಕೃತ ಅಧಿಕಾರಿಯು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ನಿಯಮಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

(4) ನೋಂದಣಿ ಪ್ರಮಾಣ ಪತ್ರವು, ಅದನ್ನು ಅನ್ಯಥಾ ರದ್ದುಗೊಳಿಸಿದ ಹೊರತು ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು:

ಪರಂತು, ನೋಂದಣಿ ಪ್ರಮಾಣ ಪತ್ರವನ್ನು ಹೊಂದಿದ ವ್ಯಕ್ತಿಗೆ, ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು, ಅಂಥ ಯಾವುದೇ ನೋಂದಣಿ ಪ್ರಮಾಣಪತ್ರವನ್ನು ರದ್ದುಗೊಳಿಸತಕ್ಕದ್ದಲ್ಲ.

**5. ಮೀನುಗಾರಿಕೆ ಹಕ್ಕುಗಳನ್ನು ಗುತ್ತಿಗೆಗೆ ನೀಡುವುದು.-** (1) ಪ್ರಾಧಿಕೃತ ಅಧಿಕಾರಿ ಅಥವಾ ಈ ಪರವಾಗಿ ರಾಜ್ಯ ಸರ್ಕಾರದಿಂದ ಅಧಿಕಾರ ಹೊಂದಿದ ಇತರ ಯಾರೇ ಅಧಿಕಾರಿಯು, ಯಾವುದೇ ನೀರಿನಲ್ಲಿ ಮೀನುಗಾರಿಕೆ ಹಕ್ಕುಗಳನ್ನು ನಿಯಮಿಸಲಾದ ರೀತಿಯಲ್ಲಿ ಗುತ್ತಿಗೆ ನೀಡತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮೀನುಗಾರಿಕೆ ಹಕ್ಕುಗಳನ್ನು ಗುತ್ತಿಗೆಗೆ ಪಡೆದ ಪ್ರತಿಯೊಬ್ಬ ವ್ಯಕ್ತಿಯು ನಿಯಮಿಸಲಾದ ನಮೂನೆಯಲ್ಲಿ ಮತ್ತು ನಿಯಮಿಸಲಾದ ಅವಧಿಯೊಳಗೆ ಒಂದು ಗುತ್ತಿಗೆ ಕರಾರನ್ನು ಬರೆದುಕೊಡತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿನ ಆದೇಶದಿಂದ ಬಾಧಿತನಾದ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಆದೇಶವನ್ನು ಅವನಿಗೆ ನೀಡಲಾದ ದಿನಾಂಕದಿಂದ ಹದಿನೈದು ದಿನಗಳೊಳಗೆ ಅಪೀಲು ವಿಚಾರಣಾ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು.

**6. ಮೀನು ಹಿಡಿಯುವುದಕ್ಕೆ ನಿಯಂತ್ರಣ.-** ಯಾವನೇ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಲೈಸೆನ್ಸ್ ಮೂಲಕ ಅಧಿಕಾರ ಹೊಂದಿದ್ದ ಹೊರತು.-

(ಎ) ಜೀವಂತ ಅಥವಾ ನಿರ್ಜೀವ ಮೀನುಗಳನ್ನು ರಾಸಾಯನಿಕಗಳು, ಸ್ಫೋಟಕಗಳು, ವಿಷವಸ್ತುಗಳು, ವಿಷಪೂರಿತ ಆಯುಧಗಳು ಅಥವಾ ಹಾನಿಕಾರಕ ಸಲಕರಣೆಗಳಿಂದ ಬಲೆಬೀಸಿ ಹಿಡಿಯತಕ್ಕದ್ದಲ್ಲ, ಕೊಲ್ಲತಕ್ಕದ್ದಲ್ಲ ಅಥವಾ ನಾಶಪಡಿಸತಕ್ಕದ್ದಲ್ಲ ಅಥವಾ ಹಾಗೆ ಹಿಡಿಯಲು, ಕೊಲ್ಲಲು ಅಥವಾ ನಾಶಪಡಿಸಲು ಪ್ರಯತ್ನಿಸತಕ್ಕದ್ದಲ್ಲ.

(ಬಿ) ಜೀವಂತವಾದ ಅಥವಾ ನಿರ್ಜೀವವಾದ ಮೀನಿನ ಮೊಟ್ಟೆಗಳನ್ನು, ಸಣ್ಣ ಮೀನುಗಳನ್ನು, ದೊಡ್ಡ ಮೀನುಗಳನ್ನು, ಎಳೆ ಪ್ರಾಯದ ಮೀನುಗಳನ್ನು ಅಥವಾ ಯಾವುದೇ ಬಗೆಯ ಮೀನಿನ ತಳಿಗಳನ್ನು ಬಲೆಬೀಸಿ ಹಿಡಿಯತಕ್ಕದ್ದಲ್ಲ, ಕೊಲ್ಲತಕ್ಕದ್ದಲ್ಲ ಅಥವಾ ನಾಶಪಡಿಸತಕ್ಕದ್ದಲ್ಲ ಅಥವಾ ಬಲೆಬೀಸಿ ಹಿಡಿಯಲು, ಕೊಲ್ಲಲು ಅಥವಾ ನಾಶಪಡಿಸಲು ಪ್ರಯತ್ನಿಸತಕ್ಕದ್ದಲ್ಲ.

**7. ಮೀನುಧಾಮಗಳ ಘೋಷಣೆ.-** (1) ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ ಯಾವುದೇ ನೀರಿರುವ ಪ್ರದೇಶವನ್ನು ಮೀನುಗಳ ರಕ್ಷಣೆ, ಸಂತಾನವೃದ್ಧಿ ಅಥವಾ ಮೀನುಗಾರಿಕೆ ಅಭಿವೃದ್ಧಿಯ ಉದ್ದೇಶಗಳಿಗಾಗಿ ಮೀನುಧಾಮವೆಂದು ಘೋಷಿಸಬಹುದು.

(2) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಘೋಷಿತವಾದ ಮೀನುಧಾಮದಲ್ಲಿ ಯಾವನೇ ವ್ಯಕ್ತಿಯು, ಜೀವಂತ ಅಥವಾ ನಿರ್ಜೀವ ಮೀನನ್ನು ಗಾಳ ಹಾಕಿ ಹಿಡಿಯತಕ್ಕದ್ದಲ್ಲ ಅಥವಾ ಬಲೆಬೀಸಿ ಹಿಡಿಯತಕ್ಕದ್ದಲ್ಲ ಅಥವಾ ನಾಶಗೊಳಿಸತಕ್ಕದ್ದಲ್ಲ ಅಥವಾ ಯಾವುದೇ ಮೀನನ್ನು ಗಾಳ ಹಾಕಿ ಹಿಡಿಯಲು ಅಥವಾ ಬಲೆಬೀಸಿ ಹಿಡಿಯಲು ಅಥವಾ ನಾಶಪಡಿಸಲು ಪ್ರಯತ್ನಿಸತಕ್ಕದ್ದಲ್ಲ.

## ಅಧ್ಯಾಯ - III

### ಕರ್ನಾಟಕ ಒಳನಾಡು ಮೀನುಗಾರಿಕೆ ಸಲಹಾ ಮಂಡಲಿಯ ರಚನೆ

**8. ಒಳನಾಡು ಮೀನುಗಾರಿಕೆ ಸಲಹಾ ಮಂಡಲಿಯ ರಚನೆ.-** (1) ರಾಜ್ಯ ಸರ್ಕಾರವು, ಹದಿಮೂರು ಜನರನ್ನು ಮೀರದಷ್ಟು ಸಂಖ್ಯೆಯ ಸದಸ್ಯರುಗಳನ್ನು ಒಳಗೊಂಡ ಕರ್ನಾಟಕ ಒಳನಾಡು ಮೀನುಗಾರಿಕೆ ಸಲಹಾ ಮಂಡಲಿಯನ್ನು ರಚಿಸಬಹುದು

(2) ಮಂಡಲಿಯು, ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು ಎಂದರೆ:-

(ಎ) ಮೀನುಗಾರಿಕೆ ಇಲಾಖೆಯ ಪ್ರಭಾರದಲ್ಲಿರುವ ಸಚಿವರು ಅಧ್ಯಕ್ಷರಾಗಿರತಕ್ಕದ್ದು;

(ಬಿ) ಮೀನುಗಾರಿಕೆ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ;

(ಸಿ) ಸರ್ಕಾರದ ಕಾರ್ಯದರ್ಶಿ, ಹಣಕಾಸು ಇಲಾಖೆ;

(ಡಿ) ಸರ್ಕಾರದ ಕಾರ್ಯದರ್ಶಿ, ನೀರಾವರಿ ಇಲಾಖೆ;

(ಇ) ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ;

(ಎಫ್) ಶಿಕ್ಷಣ ನಿರ್ದೇಶಕರು, ಮೀನುಗಾರಿಕೆ ಕಾಲೇಜು, ಮಂಗಳೂರು;

(ಜಿ) ಮೀನುಗಾರಿಕೆ ಇಲಾಖೆಯ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

(ಹೆಚ್) ಇಬ್ಬರು ವ್ಯಕ್ತಿಗಳು, ಇವರ ಪೈಕಿ ಒಬ್ಬ ಮಹಿಳೆಯಾಗಿರತಕ್ಕದ್ದು ಮತ್ತು ಇನ್ನೊಬ್ಬರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಬುಡಕಟ್ಟಿಗೆ ಸೇರಿದವರಾಗಿರತಕ್ಕದ್ದು;

(ಐ) ಕರ್ನಾಟಕ ರಾಜ್ಯ ವಿಧಾನಮಂಡಲದ ಇಬ್ಬರು ಸದಸ್ಯರು;

(ಜೆ) ಇಬ್ಬರು ವ್ಯಕ್ತಿಗಳು, ಇವರ ಪೈಕಿ ಒಬ್ಬರು ಮೀನುಗಾರಿಕೆ ಸಹಕಾರ ಸಂಘಕ್ಕೆ ಸೇರಿದವರಾಗಿರತಕ್ಕದ್ದು ಮತ್ತು ಇನ್ನೊಬ್ಬರು ಮೀನುಗಾರರ ಸಮುದಾಯಕ್ಕೆ ಸೇರಿದ ಹಾಗೂ ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ವ್ಯಕ್ತಿಯಾಗಿರತಕ್ಕದ್ದು.

(3) (ಹೆಚ್), (ಐ) ಮತ್ತು (ಜೆ) ಖಂಡಗಳಲ್ಲಿ ಉಲ್ಲೇಖಿಸಿದ ವ್ಯಕ್ತಿಗಳನ್ನು ರಾಜ್ಯ ಸರ್ಕಾರವು ನಾಮನಿರ್ದೇಶಿಸತಕ್ಕದ್ದು.

(4) (ಬಿ) ಯಿಂದ (ಇ) ವರೆಗಿನ ಖಂಡಗಳಲ್ಲಿ ಉಲ್ಲೇಖಿಸಲಾದ ಯಾವೊಬ್ಬ ಅಧಿಕಾರಿಗೆ, ಮಂಡಳಿಯ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಅವನು ಅಂಥ ಸಭೆಗೆ ಹಾಜರಾಗುವುದಕ್ಕೆ ಲಿಖಿತದ ಮೂಲಕ ಸರ್ಕಾರದ ಉಪಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿಯನ್ನು ಪ್ರತಿನಿಯೋಜಿಸಬಹುದು.

(5) ಸದಸ್ಯರು ತಮ್ಮ ಕರ್ತವ್ಯಗಳ ನಿರ್ವಹಣೆಯ ಸಂಬಂಧದಲ್ಲಿ ಅವರು ಮಾಡಿದ ವೆಚ್ಚಗಳಿಗೆ ಸಂಬಂಧಪಟ್ಟಂತೆ ನಿಯಮಿಸಬಹುದಾದ ಅಂಥ ಭತ್ಯೆಗಳನ್ನು ಸ್ವೀಕರಿಸಲು ಹಕ್ಕುವುಳ್ಳವರಾಗಿರತಕ್ಕದ್ದು.

(6) ಈ ಮುಂದಿನವುಗಳು ಮಂಡಲಿಯ ಕರ್ತವ್ಯವಾಗಿರತಕ್ಕದ್ದು, ಎಂದರೆ,-

(ಎ) ರಾಜ್ಯದಲ್ಲಿ ಒಳನಾಡು ಮೀನುಗಾರಿಕೆಯ ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣಕ್ಕೆ ಸಂಬಂಧಪಟ್ಟ ಯಾವುದೇ ವಿಷಯದಲ್ಲಿ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು;

(ಬಿ) ಮೀನುಗಾರರ ಕಲ್ಯಾಣಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರಕ್ಕೆ ನೆರವು ನೀಡುವುದು;

(ಸಿ) ಮೀನುಗಾರಿಕೆ ಮತ್ತು ಮೀನು ಉತ್ಪನ್ನಗಳ ಅಭಿವೃದ್ಧಿ ಮತ್ತು ಪ್ರಸರಣಕ್ಕೆ ನೆರವು ನೀಡುವುದು ಮತ್ತು ಪ್ರೋತ್ಸಾಹಿಸುವುದು;

(ಡಿ) ಮೀನು ಉತ್ಪಾದನೆಗೆ ಸಂಬಂಧಪಟ್ಟಂತೆ ಅಂಕಿ ಅಂಶಗಳನ್ನು ಸಂಗ್ರಹಿಸುವುದು;

(ಇ) ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವುದು; ಮತ್ತು

(ಎಫ್) ನಿಯಮಿಸಬಹುದಾದಂಥ ಇತರೆ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದು.

**9. ಮಂಡಳಿಯ ಸದಸ್ಯತ್ವಕ್ಕೆ ಅನರ್ಹತೆಗಳು.-** (1) ಒಬ್ಬ ವ್ಯಕ್ತಿಯು,-

(ಎ) ಅಪರಾಧಿ ಎಂದು ನಿರ್ಣೀತನಾಗಿದ್ದು, ಕಾರವಾಸ ಶಿಕ್ಷೆಗೆ ಗುರಿಯಾಗಿದ್ದರೆ ಮತ್ತು ಅಪರಾಧವು ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಪತನವನ್ನು ಒಳಗೊಂಡಿದ್ದುದಾಗಿದ್ದರೆ; ಅಥವಾ

(ಬಿ) ಅಸ್ವಸ್ಥ ಚಿತ್ತನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲ್ಪಟ್ಟಿದ್ದರೆ; ಅಥವಾ

(ಸಿ) ಒಬ್ಬ ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಒಡೆತನ ಹೊಂದಿದ ಅಥವಾ ನಿಯಂತ್ರಣ ಹೊಂದಿದ ನಿಗಮದ ಸೇವೆಯಿಂದ ಅಥವಾ ಮಂಡಳಿಯ ಸದಸ್ಯತ್ವದಿಂದ ತೆಗೆದು ಹಾಕಲ್ಪಟ್ಟಿದ್ದರೆ ಅಥವಾ ವಜಾ ಮಾಡಲ್ಪಟ್ಟಿದ್ದರೆ; ಅಥವಾ

(ಇ) ನೇರವಾಗಿ ಅಥವಾ ಪರೋಕ್ಷವಾಗಿ ಮಂಡಲಿಯ ಆದೇಶದ ಮೂಲಕ ಮಾಡಲಾದ ಯಾವುದೇ ಕಾಮಗಾರಿಯಲ್ಲಿ ಅಥವಾ ಮಂಡಲಿಯೊಂದಿಗೆ ಅಥವಾ ಅದರ ಅಧೀನದಲ್ಲಿ ಅಥವಾ ಅದರಿಂದ ಅಥವಾ ಅದರ ಪರವಾಗಿ ಮಾಡಿಕೊಂಡಿರುವ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಸ್ವತಃ ತಾನು ಅಥವಾ ಪಾಲುದಾರನ ಮೂಲಕ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಎಫ್) ಮಂಡಲಿಯ ಪರವಾಗಿ ನ್ಯಾಯವಾದಿಯಾಗಿ ನಿಯೋಜಿತನಾಗಿದ್ದರೆ ಅಥವಾ ಮಂಡಲಿಯ ವಿರುದ್ಧ ನ್ಯಾಯವಾದಿಯಾಗಿ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

– ಅವನು ಸದಸ್ಯನಾಗಿ ನಾಮನಿರ್ದೇಶಿತನಾಗಲು ಮತ್ತು ಸದಸ್ಯನಾಗಲು ಅನರ್ಹನಾಗತಕ್ಕದ್ದು.

(2) ನಿಗಮದ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಜಾಹೀರಾತನ್ನು ಹಾಕಲಾಗಿರುವ ಯಾವುದೇ ವೃತ್ತಪತ್ರಿಕೆಯಲ್ಲಿ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಕಾರಣದಿಂದಾಗಿ ಮಾತ್ರವೇ (1)ನೇ ಉಪ ಪ್ರಕರಣದ (ಇ) ಖಂಡದ ಮೇರೆಗೆ ಒಬ್ಬ ವ್ಯಕ್ತಿಯನ್ನು ಅನರ್ಹಗೊಳಿಸತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥವ್ಯಾಪ್ತಿಯೊಳಗೆ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂದು ಪರಿಗಣಿಸತಕ್ಕದ್ದಲ್ಲ.

**10. ನಾಮನಿರ್ದೇಶಿತ ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು.–** (1) ರಾಜ್ಯ ಸರ್ಕಾರದ ಇಚ್ಛೆಗೆ ಮತ್ತು 11ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಮಂಡಲಿಯ ನಾಮನಿರ್ದೇಶಿತ ಸದಸ್ಯರು, ತಮ್ಮ ನಾಮನಿರ್ದೇಶನದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಪ್ರತಿಯೊಬ್ಬ ನಾಮನಿರ್ದೇಶಿತ ಸದಸ್ಯನು ಯಾವುದೇ ಸಮಯದಲ್ಲಿ ರಾಜ್ಯ ಸರ್ಕಾರಕ್ಕೆ ರಾಜೀನಾಮೆ ಪತ್ರವನ್ನು ಕಳುಹಿಸುವ ಮೂಲಕ ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು:

ಪರಂತು, ರಾಜೀನಾಮೆಯನ್ನು ಒಪ್ಪಿಕೊಳ್ಳುವವರೆಗೆ ಅದು ಪರಿಣಾಮಕಾರಿಯಾಗತಕ್ಕದ್ದಲ್ಲ.

**11. ಸದಸ್ಯರನ್ನು ತೆಗೆದುಹಾಕುವುದು.–** (1) ರಾಜ್ಯ ಸರ್ಕಾರವು, ಒಬ್ಬ ನಾಮನಿರ್ದೇಶಿತ ಸದಸ್ಯನು,–

(ಎ) 9ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗೆ ಒಳಗಾದರೆ; ಅಥವಾ

(ಬಿ) ಕಾರ್ಯನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಅಧ್ಯಕ್ಷರಿಂದ ಗೈರುಹಾಜರಿಯ ಅನುಮತಿ ಪಡೆಯದೆ ಮಂಡಲಿಯ ನಿರಂತರ ಮೂರು ಸಭೆಗಳಿಗೆ ಗೈರುಹಾಜರಾದರೆ; ಅಥವಾ

(ಡಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಅವನನ್ನು ಆ ಪದದಲ್ಲಿ ಮುಂದುವರೆಸಿದರೆ ಮಂಡಲಿಯ ಹಿತಾಸಕ್ತಿಗೆ ಹಾನಿಯಾಗುತ್ತದೆ ಎಂಬಂತೆ ಅವನು ತನ್ನ ಅಧಿಕಾರವನ್ನು ದುರುಪಯೋಗಪಡಿಸಿ ಕೊಳ್ಳುತ್ತಿದ್ದಾನೆಂದು ಕಂಡುಬಂದರೆ,

– ಅವನನ್ನು ಸದಸ್ಯತ್ವದಿಂದ ತೆಗೆದುಹಾಕತಕ್ಕದ್ದು.

(2) (1)ನೇ ಪ್ರಕರಣದ ಅಡಿಯಲ್ಲಿ ಒಬ್ಬ ನಾಮನಿರ್ದೇಶಿತ ಸದಸ್ಯನನ್ನು ತೆಗೆದುಹಾಕುವ ಯಾವುದೇ ಆದೇಶವನ್ನು, ಅಂಥ ಸದಸ್ಯನಿಗೆ ಮನವಿಯನ್ನು ಮಾಡಿಕೊಳ್ಳಲು ಅವಕಾಶ ನೀಡಿದ ಹೊರತು ಹೊರಡಿಸತಕ್ಕದ್ದಲ್ಲ.

**12. ಆಕಸ್ಮಿಕ ಖಾಲಿ ಸ್ಥಾನಗಳು.–** (1) ಒಬ್ಬ ನಾಮನಿರ್ದೇಶಿತ ಸದಸ್ಯನ ರಾಜೀನಾಮೆಯಿಂದಾಗಿ ಅಥವಾ ಇತರ ಯಾವುದೇ ಕಾರಣದಿಂದಾಗಿ ಉಂಟಾದ ಆಕಸ್ಮಿಕ ಖಾಲಿ ಸ್ಥಾನವನ್ನು ರಾಜ್ಯ ಸರ್ಕಾರವು ನಾಮನಿರ್ದೇಶನದ ಮೂಲಕ ಭರ್ತಿ ಮಾಡಬಹುದು ಮತ್ತು ಹಾಗೆ ನಾಮನಿರ್ದೇಶಿತನಾದ ವ್ಯಕ್ತಿಯು ಯಾರ ಸ್ಥಾನದಲ್ಲಿ ನಾಮ ನಿರ್ದೇಶನಗೊಂಡಿರುತ್ತಾನೆಯೋ ಆ ಸದಸ್ಯನು ಆ ಪದವನ್ನು ಧಾರಣ ಮಾಡಬಹುದಾಗಿದ್ದ, ಉಳಿದ ಅವಧಿಯವರೆಗೆ ಮಾತ್ರ ಪದವನ್ನು ಧಾರಣ ಮಾಡತಕ್ಕದ್ದು.

(2) ಮಂಡಲಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯು, ಅದರ ಸದಸ್ಯತ್ವದಲ್ಲಿನ ಯಾವುದೇ ಖಾಲಿ ಸ್ಥಾನದಿಂದಾಗಿ ಅಥವಾ ಮಂಡಲಿಯ ರಚನೆ ಅಥವಾ ಪುನರ್‌ರಚನೆಯಲ್ಲಿನ ಯಾವುದೇ ದೋಷದಿಂದಾಗಿ ಅಥವಾ ಪ್ರಕರಣದ ಗುಣ ಮೌಲ್ಯಕ್ಕೆ ಬಾಧಕವಾಗದ, ಮಂಡಲಿಯ ಕಾರ್ಯ ವಿಧಾನದಲ್ಲಿನ ಯಾವುದೇ ಅಕ್ರಮದ ಕಾರಣದಿಂದಾಗಿಯೇ ಅಮಾನ್ಯವಾಗತಕ್ಕದ್ದಲ್ಲ.

**13. ಮಂಡಲಿಯ ಸಭೆಗಳು.–** (1) ಮಂಡಲಿಯು, ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಅಥವಾ ಮಂಡಲಿಯು ನಿರ್ಧರಿಸಬಹುದಾದಂಥ ಬೇರೆ ಸ್ಥಳದಲ್ಲಿ, ಕನಿಷ್ಟ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಯ ಕಾರ್ಯಕಲಾಪದ ಬಗ್ಗೆ ಗಣಪೂರ್ತಿಯನ್ನು ಒಳಗೊಂಡಂತೆ ತನ್ನ ಕಾರ್ಯ ವಿಧಾನವನ್ನು ವಿನಿಯಮಗೊಳಿಸಬಹುದು.

(2) ಅಧ್ಯಕ್ಷ ಅಥವಾ ಅವನ ಗೈರು ಹಾಜರಿಯಲ್ಲಿ ಹಾಜರಿರುವ ಸದಸ್ಯರ ಪೈಕಿ ಆಯ್ಕೆ ಮಾಡಲ್ಪಟ್ಟ ಯಾರೇ ಸದಸ್ಯನು ಮಂಡಳಿಯ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

## ಅಧ್ಯಾಯ - IV

## ಅಪರಾಧಗಳು ಮತ್ತು ದಂಡನೆಗಳು

**14. ಪ್ರವೇಶ, ಶೋಧನೆ ಜಪ್ತಿ ಮತ್ತು ಬಂಧನದ ಅಧಿಕಾರ.-** (1) ನಿರ್ದೇಶಕ ಅಥವಾ ಪ್ರಾಧಿಕೃತ ಅಧಿಕಾರಿ ಅಥವಾ ಸಬ್-ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆ ಇಲ್ಲದ ಯಾವೊಬ್ಬ ಪೊಲೀಸ್ ಅಧಿಕಾರಿಗೆ, ಯಾವೊಬ್ಬ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ಅಪರಾಧ ಮಾಡಿದ್ದಾನೆಂದು ನಂಬುವುದಕ್ಕೆ ಕಾರಣಗಳಿದ್ದರೆ, ಅವನು,-

(ಎ) ಅಂಥ ವ್ಯಕ್ತಿಯನ್ನು ಅವನ ಸ್ವಾಧೀನದಲ್ಲಿರುವ ಯಾವುದೇ ಮೀನು ಅಥವಾ ಇತರ ವಸ್ತು ಅಥವಾ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅವನಿಗೆ ನೀಡಲಾದ ಅಥವಾ ಇಟ್ಟುಕೊಳ್ಳುವ ಅಗತ್ಯವಿರುವ ಯಾವುದೇ ಲೈಸೆನ್ಸ್, ಅನುಮತಿ ಅಥವಾ ಇತರ ಯಾವುದೇ ದಸ್ತಾವೇಜನ್ನು ತಪಾಸಣೆಗಾಗಿ ಹಾಜರುಪಡಿಸುವಂತೆ ಅಗತ್ಯಪಡಿಸಬಹುದು.

(ಬಿ) ಅಂಥ ವ್ಯಕ್ತಿಯ ಅನುಭೋಗದಲ್ಲಿರುವ ಯಾವುದೇ ಆವರಣ, ಭೂಮಿ, ವಾಹನ ಅಥವಾ ನೌಕೆಯನ್ನು ಪ್ರವೇಶಿಸಿ ಶೋಧನೆ ಮಾಡಬಹುದು ಮತ್ತು ಅವನ ಸ್ವಾಧೀನದಲ್ಲಿ ಇರುವ ಯಾವುವೇ ಸಾಮಾನು ಸರಂಜಾಮುಗಳನ್ನು ಅಥವಾ ಇತರ ವಸ್ತುಗಳನ್ನು ತೆರೆಯಬಹುದು ಮತ್ತು ಶೋಧಿಸಬಹುದು.

(ಸಿ) ಯಾವುದೇ ಮೀನನ್ನು ಹಾಗೂ ಅಂಥ ಅಪರಾಧವನ್ನು ಮಾಡುವಲ್ಲಿ ಉಪಯೋಗಿಸಲಾದ ಯಾವುದೇ ಶಸ್ತ್ರ, ಆಯುಧ, ಮದ್ದುಗುಂಡು, ಉಪಕರಣ ಅಥವಾ ಇತರ ವಸ್ತುಗಳನ್ನು ಜಪ್ತಿ ಮಾಡಬಹುದು ಮತ್ತು ಅಂಥ ವ್ಯಕ್ತಿಯು ಹಾಜರಾಗಿ ಅವನ ವಿರುದ್ಧ ಮಾಡಲಾದ ಯಾವುದೇ ದೋಷಾರೋಪಕ್ಕೆ ಉತ್ತರಿಸುವನೆಂದು ಮನವರಿಕೆಯಾಗದಿದ್ದರೆ, ಅವನನ್ನು ವಾರಂಟು ಇಲ್ಲದೇ ದಸ್ತಗಿರಿ ಮಾಡಬಹುದು ಮತ್ತು ಬಂಧನದಲ್ಲಿಡಬಹುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾರೇ ಅಧಿಕಾರಿಯು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಯಾವನೇ ವ್ಯಕ್ತಿಯು ಲೈಸೆನ್ಸಿನ ಅಗತ್ಯವಿರುವ ಯಾವುದೇ ಕೃತ್ಯ ಮಾಡುತ್ತಿರುವುದನ್ನು ನೋಡಿದಾಗ, ಅಂಥ ವ್ಯಕ್ತಿಯನ್ನು ಅವನ ಲೈಸೆನ್ಸ್ ಹಾಜರುಪಡಿಸುವಂತೆ ಅಗತ್ಯಪಡಿಸುವ ಉದ್ದೇಶಕ್ಕಾಗಿ ತಡೆಯುವುದು ಮತ್ತು ಬಂಧಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು ಮತ್ತು ಅಂಥ ವ್ಯಕ್ತಿಯು ತನ್ನ ಲೈಸೆನ್ಸ್‌ನ್ನು ಹಾಜರುಪಡಿಸಲು ತಪ್ಪಿದರೆ ಅಥವಾ ತನ್ನ ಹೆಸರು ಮತ್ತು ವಿಳಾಸವನ್ನು ನೀಡಲು ನಿರಾಕರಿಸಿದರೆ ಅಥವಾ ಸುಳ್ಳು ಹೆಸರು ಮತ್ತು ವಿಳಾಸವನ್ನು ನೀಡಿದರೆ ಮತ್ತು ಅವನು ತಲೆಮರೆಸಿಕೊಳ್ಳುವನೆಂದು ನಂಬುವುದಕ್ಕೆ ಕಾರಣವಿದ್ದರೆ ಅವನನ್ನು ವಾರಂಟ್ ಇಲ್ಲದೆ ದಸ್ತಗಿರಿ ಮಾಡಬಹುದು.

(3) ಈ ಮೇಲೆ ಹೇಳಿದ ಅಧಿಕಾರಗಳ ಅಡಿಯಲ್ಲಿ ಬಂಧಿಸಲಾದ ಯಾವನೇ ವ್ಯಕ್ತಿಯನ್ನು ಅಥವಾ ಜಪ್ತಿಮಾಡಿದ ವಸ್ತುಗಳನ್ನು ಬಂಧನದ ಸ್ಥಳದಿಂದ ಮ್ಯಾಜಿಸ್ಟ್ರೇಟರ ನ್ಯಾಯಾಲಯಕ್ಕೆ ಪ್ರಯಾಣ ಮಾಡಲು ಅವಶ್ಯಕವಾದ ವೇಳೆಯನ್ನು ಹೊರತುಪಡಿಸಿ, ಅಂಥ ಬಂಧನದ ಇಪ್ಪತ್ತುನಾಲ್ಕು ಗಂಟೆಯೊಳಗೆ ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟರ ಸಮಕ್ಷಮ ಹಾಜರುಪಡಿಸತಕ್ಕದ್ದು:

ಪರಂತು, ಯಾವುದೇ ವಸ್ತುವನ್ನು ಜಪ್ತಿಮಾಡಿದ ಅಧಿಕಾರಿಯು ಅದನ್ನು ಈ ಉಪಪ್ರಕರಣದ ಅಡಿಯಲ್ಲಿ ವಿಚಾರಣೆ ನಡೆಸುವ ಮ್ಯಾಜಿಸ್ಟ್ರೇಟರ ಸಮಕ್ಷಮಕ್ಕೆ ಸಕಾಲದಲ್ಲಿ ತೆಗೆದುಕೊಂಡು ಹೋಗುವುದು ಸಾಧ್ಯವಿಲ್ಲವೆಂದು, ಅಭಿಪ್ರಾಯಪಟ್ಟಲ್ಲಿ, ಅಂಥ ಅಧಿಕಾರಿಯು ಆ ಪದಾರ್ಥಗಳನ್ನು ತಾನೇ ಮಾರಾಟಮಾಡಿ ಮಾರಾಟದಿಂದ ಬಂದ ಹಣವನ್ನು ಹತ್ತಿರದ ಸರ್ಕಾರಿ ಖಜಾನೆಗೆ ಜಮೆ ಮಾಡಬಹುದು ಮತ್ತು ಅಂಥ ಜಪ್ತಿ, ಮಾರಾಟ ಮತ್ತು ಜಮೆಯ ಬಗ್ಗೆ ಒಂದು ವರದಿಯನ್ನು ಮ್ಯಾಜಿಸ್ಟ್ರೇಟರಿಗೆ ಸಲ್ಲಿಸತಕ್ಕದ್ದು ಮತ್ತು ಆ ತರುವಾಯ ಅದರ ಮೇಲೆ ಮ್ಯಾಜಿಸ್ಟ್ರೇಟರು ಆ ಪ್ರಕರಣದ ಬಗ್ಗೆ ತಾವು ಯುಕ್ತವೆಂದು ಭಾವಿಸುವಂಥ

ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

(4) ಯಾವನೇ ವ್ಯಕ್ತಿಯು, ಸಮಂಜಸ ಕಾರಣವಿಲ್ಲದೆ, ಈ ಪ್ರಕರಣದಿಂದ ಪ್ರದತ್ತವಾದ ಅಧಿಕಾರದ ಅಡಿಯಲ್ಲಿ ಅವನು ಹಾಜರುಪಡಿಸುವುದು ಅಗತ್ಯವಿರುವ ಯಾವುದೇ ವಸ್ತುವನ್ನು ಹಾಜರುಪಡಿಸಲು ತಪ್ಪಿದರೆ, ಅವನು ಈ ಅಧಿನಿಯಮದ ವಿರುದ್ಧದ ಅಪರಾಧದ ದೋಷಿಯಾಗುತ್ತಾನೆ.

**15. ದಂಡನೆಗಳು.**- (1) ಈ ಅಧಿನಿಯಮದ ಉಪಬಂಧಗಳನ್ನು ಅಥವಾ ನಿಯಮಗಳನ್ನು ಉಲ್ಲಂಘಿಸಿದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಮಂಜೂರು ಮಾಡಲಾದ ಯಾವುದೇ ಲೈಸೆನ್ಸಿನ ಯಾವುವೇ ಷರತ್ತುಗಳನ್ನು ಉಲ್ಲಂಘನೆ ಮಾಡಿದ ಯಾವನೇ ವ್ಯಕ್ತಿಯು, ಈ ಅಧಿನಿಯಮದ ವಿರುದ್ಧದ ಅಪರಾಧದ ದೋಷಿಯಾಗುತ್ತಾನೆ ಮತ್ತು ಅಪರಾಧ ನಿರ್ಣೀತನಾದ ಮೇಲೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ

ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾವನೇ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ಅಪರಾಧಕ್ಕಾಗಿ ಅಪರಾಧ ನಿರ್ಣೀತನಾಗಿದ್ದಲ್ಲಿ, ಅಪರಾಧವನ್ನು ವಿಚಾರಣೆ ಮಾಡುವ ನ್ಯಾಯಾಲಯವು ಅಪರಾಧವನ್ನು ಯಾವ ವಸ್ತುವಿಗೆ ಸಂಬಂಧಿಸಿದಂತೆ ಮಾಡಲಾಗಿದೆಯೋ ಅದನ್ನು ಮತ್ತು ಆ ಅಪರಾಧವನ್ನು ಯಾವ ಶಸ್ತ್ರ, ಆಯುಧಗಳು, ಮದ್ದುಗುಂಡು, ಉಪಕರಣಗಳು, ನೌಕೆ ಅಥವಾ ಇತರ ವಸ್ತುಗಳಿಂದ ಮಾಡಲಾಗಿದೆಯೋ ಅದನ್ನು ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದೆಂದು ಮತ್ತು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಂಥ ವ್ಯಕ್ತಿಯು ಹೊಂದಿರತಕ್ಕ ಯಾವುದೇ ಲೈಸೆನ್ಸನ್ನು ರದ್ದುಗೊಳಿಸಬೇಕೆಂದು ಆದೇಶಿಸಬಹುದು.

(3) ಲೈಸೆನ್ಸನ್ನು ಹಾಗೆ ರದ್ದುಗೊಳಿಸುವುದು ಅಂಥ ಅಪರಾಧಕ್ಕಾಗಿ ವಿಧಿಸಲಾದ ಇತರ ಯಾವುದೇ ಶಿಕ್ಷೆಗೆ ಹೆಚ್ಚುವರಿಯಾಗಿರತಕ್ಕದ್ದು.

**16. ಅಕ್ರಮ ಜಫ್ತಿಗಾಗಿ ಶಿಕ್ಷೆ.**- ಈ ಅಧಿನಿಯಮದ ಅಡಿಯಲ್ಲಿ ಅಧಿಕಾರ ಚಲಾಯಿಸುವ ಯಾವನೇ ಅಧಿಕಾರಿಯು 14ನೇ ಪ್ರಕರಣದಲ್ಲಿ ನಮೂದಿಸಿರುವ ಕಾರಣಗಳಿಗಾಗಿ ಜಪ್ತಿ ಮಾಡುವ ನೆಪದಲ್ಲಿ ಕಿರುಕುಳಕೊಡುವುದಕ್ಕಾಗಿ ಇತರ ಯಾವೊಬ್ಬ ವ್ಯಕ್ತಿಯ ಸ್ವತ್ತನ್ನು ಜಪ್ತಿಮಾಡಿದರೆ ಅಪರಾಧ ನಿರ್ಣೀತನಾದ ಮೇಲೆ ಎರಡು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**17. ಅಪರಾಧಗಳನ್ನು ರಾಜಿ ಮಾಡಿಕೊಳ್ಳುವ ಅಧಿಕಾರ.**- (1) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ, ಯಾವುದೇ ಅಪರಾಧವನ್ನು, ರಾಜ್ಯ ಸರ್ಕಾರದಿಂದ ಈ ಬಗ್ಗೆ ಅಧಿಕಾರ ಪಡೆದ ಅಂಥ ಅಧಿಕಾರಿಯು, ಈ ಅಧಿನಿಯಮದ ಅಡಿಯಲ್ಲಿ ಯಾವನೇ ವ್ಯಕ್ತಿಯು ದಂಡನೀಯವಾದ ಅಪರಾಧವನ್ನು ಮಾಡಿರುವನೆಂದು ಸಕಾರಣವಾದ ಸಂಶಯವಿದ್ದರೆ ಅಂಥ ವ್ಯಕ್ತಿಯು ಮಾಡಿರಬಹುದೆಂದು ಸಂಶಯವಿರುವ ಅಪರಾಧಕ್ಕಾಗಿ, ನಿಯಮಿಸಬಹುದಾದಂಥ ಹಣದ ಮೊತ್ತವನ್ನು ಪಡೆಯುವ ಮೂಲಕ ಅಥವಾ ಮುಟ್ಟುಗೋಲಿಗೆ ಬದ್ಧವಾಗಿರುವ ಜಪ್ತಿ ಮಾಡಿದ ಯಾವುದೇ ಆಸ್ತಿಯನ್ನು ಅಂಥ ಅಧಿಕಾರಿಯು ಅಂದಾಜು ಮಾಡಿದ ಆ ಆಸ್ತಿಯ ಬೆಲೆಯನ್ನು ಸಂದಾಯ ಮಾಡಿದ ಮೇಲೆ ಆಸ್ತಿಯನ್ನು ಬಿಡುಗಡೆ ಮಾಡುವ ಮೂಲಕ ರಾಜಿ ಮಾಡಿಕೊಳ್ಳಬಹುದು.

(2) ಅಂಥ ಮೊತ್ತದ ಹಣವನ್ನು ಅಥವಾ ಅಂಥ ಬೆಲೆಯನ್ನು ಅಥವಾ ಸಂದರ್ಭಾನುಸಾರ ಅವೆರಡನ್ನು ಅಂಥ ಅಧಿಕಾರಿಗೆ ಸಂದಾಯ ಮಾಡಿದ ಮೇಲೆ, ಸಂಶಯಕ್ಕೊಳಗಾದ ವ್ಯಕ್ತಿಯು, ಬಂಧನದಲ್ಲಿದ್ದರೆ, ಅವನನ್ನು ವಿಮೋಚನೆಗೊಳಿಸತಕ್ಕದ್ದು ಮತ್ತು ಜಪ್ತಿ ಮಾಡಲಾದ ಸ್ವತ್ತು ಯಾವುದಾದರೂ ಇದ್ದರೆ ಅದನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಅಪರಾಧಕ್ಕೆ ಸಂಬಂಧಿಸಿದಂತೆ ಯಾವನೇ ವ್ಯಕ್ತಿ ಅಥವಾ ಸ್ವತ್ತಿನ ವಿರುದ್ಧ ಯಾವುದೇ ಮುಂದಿನ ವ್ಯವಹರಣೆಯನ್ನು ಕೈಗೊಳ್ಳತಕ್ಕದ್ದಲ್ಲ.

**18. ಅಪರಾಧದ ಸಂಜ್ಞಾನ.**- ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಅಡಿಯಲ್ಲಿ,-

(ಎ) ರಾಜ್ಯ ಸರ್ಕಾರವು ಈ ಬಗ್ಗೆ ಪ್ರಾಧಿಕೃತಗೊಳಿಸಿದ ಅಧಿಕಾರಿಯು ಫಿರ್ಯಾದು ಅಥವಾ ವರದಿಯನ್ನು ನೀಡಿದ ಹೊರತು; ಮತ್ತು

(ಬಿ) ಅಪರಾಧವನ್ನು ಮಾಡಲಾಗಿದೆ ಎಂದು ಆಪಾದನೆಯಾದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಕಾನೂನು ಕ್ರಮ ಜರುಗಿಸಿದ ಹೊರತು,

- ಯಾವುದೇ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.

**19. ಇತರ ಕಾನೂನುಗಳ ಕಾರ್ಯಾಚರಣೆಯು ಪ್ರತಿಬಂಧಕವಲ್ಲ.**- ಈ ಅಧಿನಿಯಮದಲ್ಲಿರುವ ಯಾವುದೂ, ಈ ಅಧಿನಿಯಮದ ವಿರುದ್ಧ ಅಪರಾಧವಾಗುವಂಥ ಯಾವುದೇ ಕೃತ್ಯ ಅಥವಾ ಕರ್ತವ್ಯಲೋಪಕ್ಕಾಗಿ ಯಾವನೇ

ವ್ಯಕ್ತಿಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಅಡಿಯಲ್ಲಿ ವಿಚಾರಣೆಗೊಳಪಡಿಸುವುದಕ್ಕೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಲಾದುದಕ್ಕಿಂತ ಹೆಚ್ಚಿನ ಶಿಕ್ಷೆಗೆ ಅಥವಾ ದಂಡನೆಗೆ ಅಂಥ ಇತರ ಕಾನೂನಿನ ಅಡಿಯಲ್ಲಿ ಬದ್ಧನಾಗುವುದಕ್ಕೆ ಅಡ್ಡಿಯಾಗುತ್ತದೆ ಎಂದು ಭಾವಿಸತಕ್ಕದ್ದಲ್ಲ:

ಪರಂತು, ಯಾವನೇ ವ್ಯಕ್ತಿಯನ್ನು ಎರಡು ಸಲ ಶಿಕ್ಷಿಸತಕ್ಕದ್ದಲ್ಲ.

**20. ಕಂಪನಿಗಳಿಂದ ಅಪರಾಧ.–** (1) ಈ ಅಧಿನಿಯಮದ ವಿರುದ್ಧ ಕಂಪನಿಯು ಅಪರಾಧವನ್ನು ಮಾಡಿರುವಲ್ಲಿ, ಆ ಅಪರಾಧವನ್ನು ಮಾಡಿದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರಗಳನ್ನು ನಡೆಸುವುದಕ್ಕೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು, ಕಂಪನಿಯ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಕ್ರಮಕ್ಕೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಅಪರಾಧವು ತನಗೆ ತಿಳಿಯದೇ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ಸೂಕ್ತವಾದ ಎಲ್ಲ ಪ್ರಯತ್ನಗಳನ್ನು ತಾನು ಮಾಡಿರುವನೆಂದು ಅವನು ರುಜುವಾತುಪಡಿಸಿದರೆ ಈ ಪ್ರಕರಣದಲ್ಲಿ ಇರುವುದಾವುದೂ ಅಂಥ ಯಾವನೇ ವ್ಯಕ್ತಿಯನ್ನು ಯಾವುದೇ ಶಿಕ್ಷೆಗೆ ಬದ್ಧನಾಗುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕಂಪನಿಯು ಈ ಅಧಿನಿಯಮದ ವಿರುದ್ಧ ಅಪರಾಧವನ್ನು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಇಲ್ಲವೇ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅವನ ಯಾವುದೇ ನಿರ್ಲಕ್ಷತೆಯಿಂದ ನಡೆಯಿತೆಂದು ಆರೋಪಿಸಬಹುದಾದಲ್ಲಿ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ಕ್ರಮಕ್ಕೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ**:– ಈ ಪ್ರಕರಣದ ಉದ್ದೇಶಕ್ಕಾಗಿ,–

(ಎ) "ಕಂಪನಿ" ಎಂದರೆ, ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ;

## ಅಧ್ಯಾಯ – V

### ಸಂಕೀರ್ಣ

**21. ಅಧಿಕಾರಿಗಳು ಲೋಕ ನೌಕರರಾಗಿರುವುದು.–** (1) ಈ ಅಧಿನಿಯಮದ ಮೂಲಕ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸುವ ಪ್ರತಿಯೊಬ್ಬ ಅಧಿಕಾರಿಯನ್ನು 1860ರ ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಒಬ್ಬ ಲೋಕ ನೌಕರ ಎಂದು ಭಾವಿಸತಕ್ಕದ್ದು;

**22. ಸದ್ಭಾವನೆಯಿಂದ ಕೈಗೊಂಡ ಕ್ರಮದ ಬಗ್ಗೆ ರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದರ ಬಗ್ಗೆಯೂ, ಯಾವುದೇ ಲೋಕ ನೌಕರನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**23. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ನಂತರ, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ,–

(ಎ) (i) ಸ್ಥಾವರ ಇಂಜಿನ್‌ಗಳ ಜೋಡಣೆ ಮತ್ತು ಬಳಕೆ;

(ii) ತಾತ್ಕಾಲಿಕ ಅಥವಾ ಶಾಶ್ವತವಾದ ಒಡ್ಡುಗಳು, ಅಣೆಕಟ್ಟುಗಳು ಮತ್ತು ಕೋಡಿಗಳ ನಿರ್ಮಾಣ;

(iii) ತಂತಿಜಾಲರಿ ಅಥವಾ ಇತರ ಮೀನುಹಿಡಿಯುವ ಸಾಧನಗಳು ಅಥವಾ ಸಲಕರಣೆಗಳ ಅಳತೆ, ಬಗೆ ಮತ್ತು ಗಾತ್ರ ಮತ್ತು ಅವುಗಳನ್ನು ಉಪಯೋಗಿಸುವ ವಿಧಾನ;

(iv) ಮೀನು ಹಿಡಿಯುವುದು ಮತ್ತು ಮೀನುಹಿಡಿಯುವ ಸಾಧನಗಳ ಬಳಕೆ,

- ಇವುಗಳ ನಿಷೇಧ ಅಥವಾ ನಿಯಂತ್ರಣ;

(ಬಿ) ಈ ಅಧಿನಿಯಮದ ಅಡಿಯಲ್ಲಿ ಲೈಸೆನ್ಸನ್ನು ಮಂಜೂರು ಮಾಡಬಹುದಾದ ಅಥವಾ ಮಾನ್ಯ ಮಾಡಬಹುದಾದ ಷರತ್ತುಗಳು;

(ಸಿ) ಈ ಅಧಿನಿಯಮದ ಅಡಿಯಲ್ಲಿ ಅರ್ಜಿ ಸಲ್ಲಿಸುವುದಕ್ಕಾಗಿ ಅಥವಾ ಲೈಸೆನ್ಸ್ ಮಂಜೂರು ಮಾಡುವುದಕ್ಕಾಗಿ ಉಪಯೋಗಿಸಲು ಅಗತ್ಯವಿರುವ ನಮೂನೆಗಳು ಮತ್ತು ಅವುಗಳಿಗಾಗಿ ಯಾವುದೇ ಶುಲ್ಕ ಇದ್ದರೆ, ಅದು;

(ಡಿ) ಗಾಳ ಹಾಕಿ ಅಥವಾ ಬಲೆ ಬೀಸಿ ಹಿಡಿಯಬಾರದಂಥ ಮೀನಿನ ಜಾತಿ;

(ಇ) ಮೀನು ಹಿಡಿಯುವ ಹಕ್ಕಿನ ಗುತ್ತಿಗೆ ಮಂಜೂರು ಮಾಡಬಹುದಾದ ಷರತ್ತುಗಳು ಮತ್ತು ಅಂಥ ಗುತ್ತಿಗೆ ಮಂಜೂರು ಮಾಡುವ ವಿಧಾನ;

(ಎಫ್) 7ನೇ ಪ್ರಕರಣದ ಅಡಿಯಲ್ಲಿ ಮೀನುಧಾಮವನ್ನಾಗಿ ಘೋಷಿಸಬಹುದಾದ ಉದ್ದೇಶಗಳು;

(ಜಿ) ಯಾವುದೇ ನೀರಿನಲ್ಲಿ ಮೀನುಗಳನ್ನು ಹೊರತೆಗೆಯುವುದರ ನಿಷೇಧ ಅಥವಾ ನಿಯಂತ್ರಣ;

(ಹೆಚ್) ಯಾವುದೇ ನದಿಯಲ್ಲಿ ಮೀನುಗಾರಿಕೆ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಮತ್ತು ಸಂರಕ್ಷಿಸುವುದಕ್ಕೆ ತೆಗೆದುಕೊಳ್ಳಬೇಕಾದ ಕ್ರಮಗಳು;

(ಐ) ಮೀನಿನ ತಳಿಸಂವರ್ಧನೆ ಅಥವಾ ಮೀನು ಅಭಿವೃದ್ಧಿಯ ನಿಯಂತ್ರಣ;

(ಜೆ) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕೆ ಅವಶ್ಯಕವಾದ ಅಥವಾ ಈ ಅಧಿನಿಯಮದ ಅಡಿಯಲ್ಲಿ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ;

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಲಾದ ನಂತರ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡದ ಪ್ರತಿಯೊಂದು ಸದನದ ಮುಂದೆ ಒಂದು ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗುವ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ನಿಕಟೋತ್ತರ ಅಧಿವೇಶನ ಅಥವಾ ನಿರಂತರ ಅಧಿವೇಶನ ಮುಕ್ತಾಯವಾಗುವ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಸಂದರ್ಭಾನುಸಾರ ಆ ನಿಯಮವನ್ನು ಮಾಡಕೂಡದೆಂದು ಉಭಯ ಸದನಗಳೂ ಒಪ್ಪಿದರೆ ಅಥವಾ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ. ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**24. ನಿರಸನ ಮತ್ತು ಉಳಿಸುವಿಕೆ.-** ಬೆಳಗಾಂ ಪ್ರದೇಶದಲ್ಲಿ, ಮಂಗಳೂರು ಮತ್ತು ಕೊಳ್ಳೇಗಾಲ ಪ್ರದೇಶದಲ್ಲಿ, ಕೊಡಗು ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಜಾರಿಯಲ್ಲಿರುವಂತೆ ಭಾರತ ಮೀನುಗಾರಿಕೆ ಅಧಿನಿಯಮ, 1897 (1897ರ ಕೇಂದ್ರ ಅಧಿನಿಯಮ IV ) ಮಂಗಳೂರು ಮತ್ತು ಕೊಳ್ಳೇಗಾಲ ಪ್ರದೇಶದಲ್ಲಿ, ಜಾರಿಯಲ್ಲಿರುವಂತೆ ಮೀನುಗಾರಿಕೆ (ಮದ್ರಾಸು ತಿದ್ದುಪಡಿ) ಅಧಿನಿಯಮ, 1927 (1929ರ ಮದ್ರಾಸು ಅಧಿನಿಯಮ ೱೱ ), ಗುಲ್ಬರ್ಗಾ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಹೈದರಾಬಾದ್ ಮೀನುಗಾರಿಕೆ ಅಧಿನಿಯಮ, 1356 ಫಸಲಿ (1356 ಫಸಲಿ ಹೈದರಾಬಾದ್ ಅಧಿನಿಯಮ, 23) ಮತ್ತು ಮೈಸೂರು ಬೇಟೆ ಮತ್ತು ಮೀನು ಸಂರಕ್ಷಣಾ ಅಧಿನಿಯಮ, 1901 (1901ರ ವಿನಿಯಮ ೱೱ ) ಇವುಗಳನ್ನು ಮೀನು ಮತ್ತು ಮೀನುಗಾರಿಕೆಗೆ ಸಂಬಂಧಪಟ್ಟಿರುವಷ್ಟರ ಮಟ್ಟಿಗೆ ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ನಿರಸನವು,-

(ಎ) ನಿರಸಿತವಾದ ಅಧಿನಿಯಮಗಳ ಪೂರ್ವ ಕಾರ್ಯಾಚರಣೆಗೆ ಅಥವಾ ಅವುಗಳ ಅಡಿಯಲ್ಲಿ ಯುಕ್ತವಾಗಿ ಮಾಡಲಾದ ಅಥವಾ ಒಳಗಾದ ಯಾವುದಕ್ಕೂ; ಅಥವಾ

(ಬಿ) ನಿರಸಿತವಾದ ಅಧಿನಿಯಮಗಳ ಅಡಿಯಲ್ಲಿ ಆರ್ಜಿತವಾದ, ಪ್ರಾಪ್ತವಾದ ಅಥವಾ ಗುರಿಯಾದ ಯಾವುದೇ ಹಕ್ಕು, ವಿಶೇಷಾಧಿಕಾರ, ಹೊಣೆ ಅಥವಾ ಬಾಧ್ಯತೆಗೆ; ಅಥವಾ

(ಸಿ) ನಿರಸಿತವಾದ ಅಧಿನಿಯಮದ ಉಪಬಂಧಗಳ ವಿರುದ್ಧ ಮಾಡಲಾದ ಯಾವುದೇ ಅಪರಾಧದ ಸಂಬಂಧದಲ್ಲಿ ಗುರಿಯಾದ ಅಥವಾ ಅನುಭವಿಸಿದ ಯಾವುದೇ ದಂಡನೆ, ಮುಟ್ಟುಗೋಲು ಅಥವಾ ಶಿಕ್ಷೆಗೆ; ಅಥವಾ

(ಡಿ) ಮೇಲೆ ಹೇಳಿದಂಥ ಯಾವುದೇ ಹಕ್ಕು, ವಿಶೇಷಾಧಿಕಾರ, ಹೊಣೆ, ಬಾಧ್ಯತೆ, ದಂಡನೆ ಮುಟ್ಟುಗೋಲು ಅಥವಾ ಶಿಕ್ಷೆಗೆ ಸಂಬಂಧಿಸಿದ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯಕ್ಕೆ, – ಬಾಧಕವಾಗತಕ್ಕದ್ದಲ್ಲ ಮತ್ತು ಅಂಥ ನಿರಸಿತ ಅಧಿನಿಯಮವು ನಿರಸಿತವಾಗಿಲ್ಲದಿದ್ದರೆ ಹೇಗೋ ಹಾಗೆ ಅಂಥ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯಗಳನ್ನು ಪ್ರಾರಂಭಿಸಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಅಂಥ ಯಾವುದೇ ದಂಡನೆ, ಮುಟ್ಟುಗೋಲು ಅಥವಾ ಶಿಕ್ಷೆಯನ್ನು ವಿಧಿಸಬಹುದು.

ಅನುಸೂಚಿ 17ನೇ ಪ್ರಕರಣದ ಅಡಿಯಲ್ಲಿ ರಾಜಿ ಮಾಡಿಕೊಳ್ಳುವ ಅಪರಾಧಗಳು

(1) ಲೈಸೆನ್ಸ್ ಇಲ್ಲದೆ ಮೀನು ಹಿಡಿಯುವುದು;

(2) ನಿಷಿದ್ಧ ಕಾಲದಲ್ಲಿ ನಿಷೇಧಿತ ಜಾತಿಯ ಯಾವುದೇ ಮೀನನ್ನು ಕೊಲ್ಲುವುದು ಅಥವಾ ಹಿಡಿಯುವುದು ಅಥವಾ ಮಾರಾಟ ಮಾಡುವುದು ಅಥವಾ ಮಾರಾಟ ಮಾಡುವುದಕ್ಕೆ, ಕೊಲ್ಲುವುದಕ್ಕೆ ಅಥವಾ ಹಿಡಿಯುವುದಕ್ಕೆ ಪ್ರಯತ್ನ ಮಾಡುವುದು;

(3) ಮೀನು ಧಾಮದಲ್ಲಿ ಮೀನು ಹಿಡಿಯುವುದು ಅಥವಾ ಮೀನು ಹಿಡಿಯುವುದಕ್ಕೆ ಪ್ರಯತ್ನಿಸುವುದು.

**ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1996ನ್ನು ಈ ಕೆಳಕಂಡ ಅಧಿನಿಯಮಗಳ ಮೂಲಕ ತಿದ್ದುಪಡಿ ಮಾಡಲಾಗಿದೆ. ಅವುಗಳೆಂದರೆ,–**

**ತಿದ್ದುಪಡಿಗಳು – (ಕಾಲಾನುಕ್ರಮವಾಗಿ)**

| ಕ್ರಮ ಸಂಖ್ಯೆ | ಅಧಿನಿಯಮ ಸಂಖ್ಯೆ ಮತ್ತು ವರ್ಷ | ತಿದ್ದುಪಡಿಯಾದ ಪ್ರಕರಣಗಳು | ಷರಾ |
|---|---|---|---|
| 1 | ೨೦೦೩ರ ಅಧಿನಿಯಮ ಸಂಖ್ಯೆ 27 | – | ದಿನಾಂಕ 16.1೦.2೦೦3ರ ಅಧಿಸೂಚನೆ ಸಂಖ್ಯೆ: ಪಸಂಮಿ :149: ಮೀಇಯೋ 2೦೦3ರಲ್ಲಿ ದಿನಾಂಕ 1.1೦.2೦೦3ರಿಂದ ಅಧಿನಿಯಮವನ್ನು ಜಾರಿಗೊಳಿಸಲಾಗಿದೆ. |

**ತಿದ್ದುಪಡಿಗಳು (ಪ್ರಕರಣವಾರು)**

| **ಪ್ರಕರಣಗಳು** | **ಅಧಿನಿಯಮ ಸಂಖ್ಯೆ ಮತ್ತು ವರ್ಷ** | **ಷರಾ** |
|---|---|---|
| – | – | – |